ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ನ್ಯಾಯಾಲಯ,
ಶ್ರೀನಿವಾಸಪುರ
ಸಿ.ಸಿ. ನಂಃ 1623/2023

PW: 1
CW: 1

ಸಾಕ್ಷಿದಾರರ ಹೆಸರು : ಚೌಡಮ್ಮ
ಗಂಡನ ಹೆಸರು : ನಾಗಪ್ಪ
ವಯಸ್ಸು : 75 ವರ್ಷ
ಉದ್ಯೋಗ : ಗೃಹಣಿ
ವಾಸಸ್ಥಳ : ಯಲ್ದೂರು ಗ್ರಾಮ

ಪ್ರಮಾಣ ವಚನವನ್ನು ಬೋದಿಸಲಾಯಿತು. ದಿನಾಂಕಃ23.01.2026

ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ

ಆರೋಪಿ ನಮ್ಮ ಮನೆ ಮುಂದೆ ವಾಸವಿರುತ್ತಾರೆ. 2 ವರ್ಷಗಳ ಹಿಂದೆ ಬೆ.6.00 ಗಂಟೆಯ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಆರೋಪಿ ಸಾಕಿದ್ದ ಕೋಳಿ ನಮ್ಮ ಮನೆಯ ಬಳಿ ಬಂದಿದ್ದು ನಾನು ಕೋಳಿಯನ್ನು ಓಡಿಸಿದ್ದಕ್ಕೆ ಆರೋಪಿಯು ಏಕೆ ಕೋಳಿಯನ್ನು ಓಡಿಸಿದ್ದೀಯ ಎಂದು ನನ್ನೊಂದಿಗೆ ಗಲಾಟೆ ಮಾಡಿ, ಒಂದು ದೊಣ್ಣೆಯಿಂದ ನನ್ನ ಎಡಕೈಗೆ ಮತ್ತು ತಲೆಗೆ ಹೊಡೆದು ರಕ್ತಗಾಯಪಡಿಸಿದ್ದರು. ಚಾಸಾ.2 ರವರು ಬಂದು ಜಗಳ ಬಿಡಿಸಿದ್ದು ಚಾಸಾ.3 ರವರು ನನ್ನನ್ನು ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿದ್ದರು. ಅದೇ ದಿನ ಪೊಲೀಸರು ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದರು. ಸದರಿ ಹೇಳಿಕೆಗೆ ನಾನು ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೆ. ( ದೂರನ್ನು ನಿಪಿ.1 ಎಂದು, ಗುರುತಿಸಲಾಯಿತು ).

ಮರುದಿನ ಪೊಲೀಸರು ಗಲಾಟೆ ನಡೆದ ಸ್ಥಳಕ್ಕೆ ಬಂದು ಪಂಚನಾಮೆ ಬರೆದಿದ್ದರು. ಸದರಿ ಪಂಚನಾಮೆಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೆ. ( ಪಂಚನಾಮೆಯನ್ನು ನಿಪಿ. 2 ಎಂದು ಗುರುತಿಸಲಾಯಿತು).

ನಾನು ಆರೋಪಿ ಹಲ್ಲೆಗಾಗಿ ಬಳಸಿದ್ದ ಮತ್ತು ಈಗ ನ್ಯಾಯಾಲಯದಲ್ಲಿ ನೋಡುತ್ತಿರುವ ಹಾಗೂ ಗುರುತಿಸಿದ್ದ ಎಂ ಓ 1 ದೊಣ್ಣೆಯನ್ನು ಪೊಲೀಸರಿಗೆ ನೀಡಿದ್ದೆ, ಪೊಲೀಸರು ಅದನ್ನು ಪಂಚನಾಮೆ ಬರೆದು ವಷಪಡಿಸಿಕೊಂಡಿದ್ದರು. ಸದರಿ ಪಂಚನಾಮೆಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೆ. ( ಪಂಚನಾಮೆಯನ್ನು ನಿಪಿ. 3 ಎಂದು ಗುರುತಿಸಲಾಯಿತು).

(ಸ ಸ ಅ ರವರ ವಿನಂತಿ ಮೇರೆಗೆ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಸಲಾಯಿತು)

**ಪಾಟೀಸವಾಲುಃ ಸ ಸ ಅ ರವರಿಂದಃ**

ಆರೋಪಿ ನನಗೆ ಅವಾಚ್ಯಶಬ್ಧಗಳಲ್ಲಿ ಬೆದಾಡಿದ್ದರು ಎಂದರೆ ಸರಿ. ನಿಪಿ.2 ಮತ್ತು 3 ಪಂಚನಾಮೆ ಬರೆಯುವ ಸಮಯದಲ್ಲಿ ಚಾಸಾ.4 ಮತುತ 5 ರವರು ಹಾಜರಿದ್ದರು ಎಂದರೆ ಸರಿ.

**ಪಾಟೀ ಸವಾಲುಃ (ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ., ಶ್ರೀನಿವಾಸಪುರ